ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ಜಗತ್ತಿಗೆ ಒಬ್ಬನೇ ಸೂರ್ಯ, ಒಬ್ಬನೇ ಚಂದ್ರನಿದ್ದಂತೆ ಒಬ್ಬನೇ ದೇವನೇಕಿಲ್ಲ?*



ವಾಹನ ಅದೇ; ಇಂಗ್ಲೆಂಡಿನಲ್ಲಿ ಅದನ್ನು ಲಾರಿ ಎನ್ನುತ್ತಾರೆ, ಅಮೆರಿಕದಲ್ಲಿ ಟ್ರಕ್. ದೇವನೂ ಹಾಗೆಯೇ.

ಕುಮಾರ ಚಲವಾದಿ, ಹೊಳೆನರಸಿಪುರ

*ಮೊಬೈಲ್ ಕಳೆದುಹೋದರೆ ಮಿಸ್ಡ್ ಕಾಲ್ ಮಾಡಿ ಕಂಡುಹಿಡಿಯಬಹುದು. ಕನ್ನಡಕ ಕಳೆದುಹೋದರೆ?*

ಫ್ರೇಂ ಹಿಂಭಾಗಕ್ಕೆ ಎಲ್‌ಇಡಿ ಬ್ಲಿಂಕರ್ ಅಂಟಿಸಿಬಿಡಿ. ಮಿಣುಕೇ ಸ್ಪೆಕ್ಸಿನ ಸಾಕ್ಷಾತ್ಕಾರ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸಮುದ್ರದ ನೀರು ಉಪ್ಪಾಗಿರಲು ಕಾರಣವೇನು?*

ಅಷ್ಟೊಂದು ಮೀನುಗಳು, ತಿಮಿಂಗಿಲಗಳು, ಮೊಸಳೆಗಳು, ಮನುಷ್ಯರು, ನೀರಾನೆಗಳು ಈಜಿದಾಗ ಹೊಮ್ಮಿದ ಬೆವರು ಸೇರಿ, ಸೇರಿ, ಸೇರಿ.....

ರಮೇಶ್, ಹನುಮನಾಳು

*ಶಿಕ್ಷಕರಿಗೆ ಉತ್ತರ ಗೊತ್ತಿದ್ದರೂ ಮಕ್ಕಳನ್ನು ಪ್ರಶ್ನೆ ಕೇಳುತ್ತಾರೆ; ಏಕೆ?*



ವೆರೈಟಿ ಉತ್ತರಗಳಿಗಾಗಿ. 2+2=? ಎಂಬುದಕ್ಕೆ ಒಂದೇ ಮಗುವಿಗೆ ಒಮ್ಮೊಮ್ಮೆ ಒಂದೊಂದು ಉತ್ತರ ಕೊಡುವ ತಾಕತ್ತಿರುತ್ತದೆ!

ಹಾಡ್ಯ ಬಿ. ಜಯಾನಂದ, ಮೈಸೂರು

*ಪ್ರಾಯ ಜಾತ್ರೆ, ವೃದ್ಧಾಪ್ಯ ಸಂತೆ ಎನ್ನುತ್ತಾರೆ. ಹಾಗಾದರೆ ಬಾಲ್ಯ?*

ಫ್ಲವರ್ ಷೋ!

ಎಚ್.ಜಿ. ಜಗದೀಶ್, ಮೈಸೂರು

*ಬೇಡ! ಬೇಡವೇ ಬೇಡ! ಎಂದರೂ ಜೀವನದಲ್ಲಿ ಸಿಕ್ಕುವುದು ಯಾವುದು?*

ಆಂಬುಲೆನ್ಸ್‌ನಲ್ಲಿ ಸಾಗುವಾಗ ಟ್ರಾಫಿಕ್ ಜಾಮ್!

ಮಹಾಲಿಂಗ ಎಂ.ಗೋರಬಾಳ, ಮಾಣಿಕವಾಡಿ

*ದಿಟನಾಗರ ಕಂಡರೆ ಕೊಲ್ಲುತ್ತಾರೆ. ಕಲ್ಲುನಾಗರದ ಪೂಜೆ ಏಕೆ?*

ಸುಬ್ರಹ್ಮಣ್ಯನನ್ನು ಪೂಜಿಸಿ, ಅವನ ವಾಹನವನ್ನು ಕೊಂದು ಚಪ್ಪರಿಸಿ ತಿನ್ನುವವರಿಲ್ಲವೇ? ಅವರವರ ಹುಚ್ಚು ಅವರವರಿಗೆ ಆನಂದ.

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮ ಉತ್ತರಗಳು ಬೀಚಿ, ಕೈಲಾಸಂ, ನವರತ್ನರಾಂ, ಹಿರಣ್ಣಯ್ಯನವರ ರಸಪಾಕದಂತಿದೆಯಲ್ಲಾ ರಾಂ?*

ಆ ಧೀಮಂತರ ಪರೋಕ್ಷ, ಅಪರೋಕ್ಷ ಸನಿಹದ ಪ್ರಭಾವ. ಗಂಧದ ಕೊರಡಿಗೆ ಉಜ್ಜಿಕೊಂಡರೆ ಜಾಕಾಯಿಗೂ ಗಂಧದ ಗಂಧ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ನನ್ನ ಪ್ರೇಯಸಿಗೆ ನನ್ನೊಂದಿಗೆ ಮಿಂಚು-ಗುಡುಗು-ಸಿಡಿಲುಭರಿತ ಮಳೆಯಲ್ಲಿ ನೆನೆಯುವ ಬಯಕೆ ಉಂಟಾಗಿದೆ. ಏನು ಮಾಡಲಿ?*

ಎಚ್ಚರ! ಹೆಚ್ಚುಕಡಿಮೆ ಆದರೆ ವರ್ಷದಲ್ಲೇ ವರ್ಷದಿಂದ ವರ್ಷಾಬ್ಧಿಕ!

ಹೇಮಾ ಅಂಕಲ್ ಶ್ಯಾಮ್, ಬೆಂಗಳೂರು

ಪ್ರಶ್ನೆ ಕೇಳುವವರು ಬುದ್ಧಿವಂತರೋ, ಉತ್ತರಿಸುವವರು ಬುದ್ಧಿವಂತರೋ?

ಈ ಅಂಕಣದಲ್ಲಂತೂ ಕೇಳುವವರೇ; ಪಂಡಿತರು, ವಕೀಲರು, ವೈದ್ಯರು, ಅಧಿಕಾರಿಗಳ ಶ್ರೇಷ್ಠ ಪಡೆಗೆ ಹೋಲಿಸಿದರೆ ಉತ್ತರಿಸುವವ ಕುಬ್ಜ.

ಬಿ.ಆರ್. ರವಿಕುಮಾರ್, ಬೆಂಗಳೂರು

*ಜೀವನವನ್ನು ಬದುಕಿ ಅನುಭವಿಸಲು ಏನು ಬೇಕು ಹೇಳಿ?*

ಬದುಕಲು ಪ್ರಾಣ, ಅನುಭವಿಸಲು ಪ್ರಾಣ ತಿನ್ನುವ ಜನ.

ಆರತಿ ಘಟಿಕಾರ್, ದುಬೈ

*ಕಂಪ್ಯೂಟರ್‌ನಲ್ಲಿ ವೈರಸ್ ತುಂಬಿಕೊಂಡ ಹಾಗೆ ತಲೆಯಲ್ಲಿ ಕೂಡ ವೈರಸ್ ತುಂಬಿದಾಗ ಏನು ಮಾಡಬೇಕು?*

ವಿವೇಚನೆ ಡ್ರೈವ್ ಓಪನ್ ಮಾಡಿ ತೃಪ್ತಿ ಮತ್ತು ಹಾಸ್ಯ ಎಂಬ ಆಂಟಿವೈರಸ್‌ಗಳನ್ನು ಚಾಲನೆಗೊಳಿಸಿ.

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

*ಅಮೃತ ಮತ್ತು ವಿಷ ಬೆರೆತ ಪ್ರೇಮ ಯಾವುದು?*

ಪಾರ್ಟ್‌ನರ್ಷಿಪ್ ಕಂಪನಿಯ ಪಾರ್ಟ್‌ನರ್‌ಗಳದು; ಲಾಭ ಹಂಚಿಕೊಳ್ಳುವ ವಿಷಯದಲ್ಲಿ ಹೊರಹೊರಗೆ ಅಮೃತ, ಒಳಗೊಳಗೆ ವಿಷ!

ಶೋಭಾ ಎಂ.ಆರ್. ಮರ್ಕುಲಿ

*ಬೇಲಿಯೇ ಎದ್ದು ಹೊಲ ಮೇಯ್ದರೆ ಬೆಳೆಯ ರಕ್ಷಣೆ ಹೇಗೆ?*

ಇಂಷೂರೆನ್ಸ್ ಮಾಡಿಸಿ!

ವಿ. ಹಮೀದ್, ವಿಟ್ಲ

*ನನ್ನಾಕೆ ಇತ್ತೀಚೆಗೆ ಮಾತನಾಡುವುದಿಲ್ಲ, ಮಾತನಾಡಿಸಲು ಏನು ಮಾಡಲಿ?*

ಛೆ! ಅಪರೂಪಕ್ಕೆ ದೊರೆತಿರುವ ನೆಮ್ಮದಿಯನ್ನು ಹಾಳು ಮಾಡಿಕೊಳ್ಳಬೇಡಿ, ಸುಮ್ಮನಿರಿ.

ಮಹಾವೀರ ಕಾಸರ, ಶಿವಮೊಗ್ಗ

*ಹಣ ಕಂಡರೆ ಹೆಣ ಏಕೆ ಬಾಯಿ ಬಿಡುತ್ತದೆ?*

ಹೆಣವಾಗಿದ್ದರೂ ತಮ್ಮ ಹಣದಾಸೆ ತೀರುವ ತನಕ ಐಸಿಯೂಲಿಟ್ಟು ಬಿಲ್ ಬೆಳೆಸುವ ವೈದ್ಯರ ಋಣ ತೀರಿಸಲು!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

*ಜಗತ್ತಿನ ಅತ್ಯಂತ ಪ್ರಬಲ ಶಕ್ತಿ ಯಾವುದು?*



ಮುಗುಳ್ನಗೆ.

ರಮೇಶ್, ಹನುಮನಾಳು

ಹೃದಯ ಅವರಲ್ಲೇ ಇದ್ದರೂ ಪ್ರೇಮಿಗಳು ‘ನನ್ನ ಹೃದಯ ಕದ್ದುಬಿಟ್ಟೆ’ ಅನ್ನುತ್ತಾರೇಕೆ?

ಪ್ರೇಮಕ್ಕೂ ಒಂದು ಸಿಲಬಸ್ ಇದೆ. 'ಹೃದಯ ಕದ್ದೆ' ಎಂಬುದು ಆರ್ಟ್ ಆಫ್ ಲವಿಂಗ್ ಪುಸ್ತಕದ ಫಸ್ಟ್ ಚಾಪ್ಟರ್‌ನ ಫಸ್ಟ್ ಲೈನ್.

■ ರಾಮ್